# ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ

ನವನಗರ, ಹುಬ್ಬಳ್ಳಿ– 580025.

ಫೋನ್ ನಂ. 0836–2222392,2223392

www.kslu.ac.in


ಸಂಖ್ಯೆ: ಕರಾಕಾವಿ/ಆಡಳಿತ/ಉ.ಗೃ.ದ./2016–17/–0574 ದಿನಾಂಕ: 23.06.2016

## ಟೆಂಡರ್ ಅಧಿಸೂಚನೆ

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಆವರಣದಲ್ಲಿರುವ ಉಪಹಾರ ಗೃಹವನ್ನು 2 (ಎರಡು) ವರ್ಷಗಳ ಅವಧಿಯವರೆಗೆ ನಡೆಸಿಕೊಂಡು ಹೋಗಲು ಆಸಕ್ತ ವ್ಯಕ್ತಿ/ಹೊಟೇಲ್/ಫರ್ಮ್‌ಗಳಿಂದ ಟೆಂಡರಗಳನ್ನು ಆಹ್ವಾನಿಸಲಾಗಿದೆ.

1. ಆಸಕ್ತಿಯುಳ್ಳ ಗುತ್ತಿಗೆದಾರರು ಈ ವಿಶ್ವವಿದ್ಯಾಲಯದ ಆವರಣದಲ್ಲಿರುವ ಉಪಹಾರಗೃಹವನ್ನು ನಡೆಸಿಕೊಂಡು ಹೋಗುವ ಕುರಿತಂತೆ ಮಾಸಿಕ ಭಾಡಿಗೆ ಎಷ್ಟು ಮೊತ್ತ ನೀಡುವಿರಿ ಎನ್ನುವುದನ್ನು ನಮೂದಿಸಿ ಮೊಹರಬಂದ್ ಲಕೋಟೆಯಲ್ಲಿ ಇಟ್ಟು ಲಕೋಟೆಯ ಮೇಲೆ ಕುಲಸಚಿವರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ, ಹುಬ್ಬಳ್ಳಿ ರವರ ಪದನಾಮವನ್ನು ಬರೆದು ದಿನಾಂಕ: **15–07–2016ರ ಮಧ್ಯಾಹ್ನ 3.00 ಗಂಟೆಯೊಳಗಾಗಿ ಈ ಕಚೇರಿಯಲ್ಲಿ ಇಟ್ಟ ಟೆಂಡರ್ ಪೆಟ್ಟಿಗೆಯಲ್ಲಿ ಹಾಕಬೇಕು.** ಒಂದು ವೇಳೆ ಈ ಕಛೇರಿಗೆ ಸದರ ದಿನಾಂಕ ಹಾಗೂ ವೇಳೆಯ ಒಳಗೆ ಬರಲು ಸಾಧ್ಯವಾಗದಿದ್ದಲ್ಲಿ ಅಂಚೆಯ ಮುಖಾಂತರ ದಿನಾಂಕ: 15–07–2016ರಂದು ಮಧ್ಯಾಹ್ನ 3.00 ಘಂಟೆಯೊಳಗೆ ಈ ಕಛೇರಿಗೆ ತಲುಪುವಂತೆ **ನೊಂದಾಯಿತ ಅಂಚೆಯ ಮೂಲಕ** ಕಳುಹಿಸಬೇಕು. ನಿಗದಿತ ದಿನಾಂಕ ಹಾಗೂ ಸಮಯದ ನಂತರ ಬರುವ ಟೆಂಡರಗಳನ್ನು ಪರಿಗಣಿಸಲಾಗುವುದಿಲ್ಲ.
2. ನಿಗದಿತ ನಮೂನೆಯಲ್ಲಿ ತಯಾರಿಸಿದಂತಹ ಟೆಂಡರ್ ಫಾರ್ಮಗಳನ್ನು ಈ ವಿಶ್ವವಿದ್ಯಾಲಯದ ಹಣಕಾಸು ಶಾಖೆಯಿಂದ ರಜಾ ದಿನಗಳನ್ನು ಹೊರತುಪಡಿಸಿ, ಕಚೇರಿ ವೇಳೆಯಲ್ಲಿ ನೀಡಲಾಗುವದು.

   ಟೆಂಡರ್ ಫಾರ್ಮಗಳನ್ನು ಪಡೆದುಕೊಳ್ಳುವ ದಿನಾಂಕ, ಹಾಕುವ ಕೊನೆಯ ದಿನಾಂಕ ಹಾಗೂ ಟೆಂಡರ್ ಫಾರ್ಮಗಳ ಮೌಲ್ಯದ ವಿವರ ಈ ಕೆಳಗಿನಂತೆ ಇರುವದು.

| ಕ್ರ ಸಂ. | ಟೆಂಡರ್ ಫಾರ್ಮಗಳನ್ನು ನೀಡಲು ನಿಗದಿಗೊಳಿಸಿದ ದಿನಾಂಕ | ಟೆಂಡರ್ ಫಾರ್ಮ ಮೌಲ್ಯ | ಭರಿಸಿದ ಟೆಂಡರ್ ಫಾರ್ಮಗಳನ್ನು ಟೆಂಡರ್ ಪೆಟ್ಟಿಗೆಯಲ್ಲಿ ಹಾಕುವ ದಿನಾಂಕ ಹಾಗೂ ಸಮಯ | ಟೆಂಡರ್ ತೆರೆಯುವ ದಿನಾಂಕ |
|---|---|---|---|---|
| 1. | 08–07–2016 ರಿಂದ 14–07–2016ರವರೆಗೆ ಕಚೇರಿ ವೇಳೆ ಮುಕ್ತಾಯಗೊಳ್ಳುವ ಅವಧಿಯವರೆಗೆ. | ರೂ.100.00 ಹಾಗೂ ಚಾಲ್ತಿಯಲ್ಲಿರುವ ಕರಗಳು. | 15–07–2016 ಮಧ್ಯಾಹ್ನ 3.00 ಗಂಟೆಯವರೆಗೆ ಮಾತ್ರ. | ಅದೇ ದಿನ ಮಧ್ಯಾಹ್ನ 4.00 ಗಂಟೆಯ ನಂತರ ಅಥವಾ ಮರುದಿನ ಅಂದರೆ ದಿನಾಂಕ:16–07–2016 ರಂದು ಕಚೇರಿ ವೇಳೆಯಲ್ಲಿ. |

**ಈ ವಿಶ್ವ ವಿದ್ಯಾಲಯದ ಉಪಹಾರ ಗೃಹವು ಈ ಕೆಳಗೆ ನಮೂದಿಸಿದ ಸವಲತ್ತುಗಳನ್ನು ಒಳಗೊಂಡಿರುತ್ತದೆ.**

| | | |
|---|---|---|
| 1. | ಉಪಹಾರ ಗೃಹದ ವಿಸ್ತೀರ್ಣ | 460 ಚ.ಅಡಿ. |
| 2. | ಉಪಹಾರ ಗೃಹದ ಮುಂದಿನ ಭಾಗದ ಪೋರ್ಟಿಕೋದ ವಿಸ್ತೀರ್ಣ | 250 ಚ.ಅಡಿ |
| 3. | ಉಪಹಾರ ಗೃಹದ ಎಡಗಡೆ ಭಾಗದ ಪೋರ್ಟಿಕೋದ ವಿಸ್ತೀರ್ಣ | 250 ಚ.ಅಡಿ |
| 4. | Cooking Platform | |
| 5. | Serving Platform | |
| 6. | Washing Platform with water tap | |
| 7. | Storage Rack | |
| 8. | ನೀರಿನ ಸೌಲಭ್ಯ-two wash basins (one inside & one outside) | |
| 9. | ವಿದ್ಯುತ್ ಸೌಲಭ್ಯ- (ಉಪಹಾರ ಗೃಹದ ಒಳಗಡೆ 1 ಫ್ಯಾನ್ ಹಾಗೂ 3 ಟ್ಯೂಬ್‌ಲೈಟ್ & ಹೊರಗಡೆ 3 ಬಲ್ಬ್) | |

3. ಈ ಉಪಹಾರ ಗೃಹವನ್ನು ನಡೆಸಿಕೊಂಡು ಹೋಗಲು ಈ ಕೆಳಕಂಡ ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಿದೆ.

A. ಉಪಹಾರ ಗೃಹದ ಗುತ್ತಿಗೆ ಅವಧಿಯು, ಯಶಸ್ವಿ ಟೆಂಡರುದಾರರು ಈ ಕಚೇರಿಯಲ್ಲಿ ಕರಾರುನಾಮೆಗೆ ಸಹಿಮಾಡಿದ ದಿನಾಂಕದಿಂದ **2 ವರ್ಷಗಳ** ಅವಧಿಯ ವರೆಗೆ ಮಾತ್ರ ಇರುತ್ತದೆ.

B. ಯಶಸ್ವಿ ಟೆಂಡರುದಾರರು ಪ್ರತಿ ತಿಂಗಳ ಬಾಡಿಗೆ ಮೊತ್ತವನ್ನು ಆಯಾ ತಿಂಗಳಿನ ದಿನಾಂಕ: **05 ನೇ** ತಾರೀಖಿನೊಳಗಾಗಿ ಸಂದಾಯ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಹಾಗೂ ತಡವಾಗಿ ಪಾವತಿ ಮಾಡಿದಲ್ಲಿ, ಪ್ರತಿದಿನಕ್ಕೆ **ರೂ. 250/-** ಗಳ ದಂಡವನ್ನು ವಿಧಿಸಿ ಬಾಡಿಗೆಯನ್ನು ತೆಗೆದುಕೊಳ್ಳಲಾಗುವುದು.

C. ಈ ಉಪಹಾರ ಗೃಹದಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು ಹಾಗೂ ಉಪಹಾರಗೃಹದಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಸಮವಸ್ತ್ರಗಳನ್ನು, ಗುತ್ತಿಗೆದಾರರು ತಮ್ಮ ಖರ್ಚಿನಿಂದಲೇ ನೀಡಬೇಕು. ಅಲ್ಲದೇ ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳಬಾರದು. ಕಾರ್ಮಿಕರಿಗೆ ಸಂಬಂಧಪಟ್ಟ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

D. ಈ ಉಪಹಾರ ಗೃಹದಲ್ಲಿ ನೀಡಲಾಗುವ ಉಪಹಾರಗಳ ಪ್ರಮಾಣ ಹಾಗೂ ಬೆಲೆಯು, ಈ ಕುರಿತು ಸರ್ಕಾರ/ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ರವರು ಕಾಲಕಾಲಕ್ಕೆ ಸುತ್ತೋಲೆ ಮೂಲಕ ಹೊರಡಿಸಲಾಗುವ ನಿರ್ದೇಶನಗಳ ಮೇರೆಗೆ ಪ್ರಮಾಣ ಹಾಗೂ ಬೆಲೆಗೆ ಸಮಾನವಾಗಿರಬೇಕು.

E. ಯಶಸ್ವಿ ಟೆಂಡರುದಾರರು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯಿಂದ ಅನುಮೋದನೆಗೊಂಡ ಉಪಹಾರಗಳ ದರಪಟ್ಟಿಯನ್ನು (ರೇಟ್ ಬೋರ್ಡ್) ಕಡ್ಡಾಯವಾಗಿ ಉಪಹಾರ ಗೃಹದ ಹೊರಗಡೆ ಹಾಗೂ ಒಳಗಡೆ ಬರೆದು ನೇತು ಹಾಕಬೇಕು. ಹಾಗೂ ಈ ವಿಶ್ವವಿದ್ಯಾಲಯದ ಅನುಮೋದನೆಯನ್ನು ಪಡೆಯದೇ ಯಾವುದೇ ಉಪಹಾರಗಳ ಬೆಲೆಯನ್ನು ಬದಲಾಯಿಸುವಂತಿಲ್ಲ.

F. ಯಶಸ್ವಿ ಟೆಂಡರುದಾರರು ಗ್ರಾಹಕರಿಗೆ **ಶುದ್ಧ ಕುಡಿಯುವ** ನೀರಿಗಾಗಿ water purifier ಅನ್ನು ಕಡ್ಡಾಯವಾಗಿ ಅಳವಡಿಸಬೇಕು.

G. ಈ ಉಪಹಾರ ಗೃಹವು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಸ್ಥಾನಿಕ ಅಭಿಯಂತರರು ಇವರ ಉಸ್ತುವಾರಿಯಲ್ಲಿ ನಡೆಯಬೇಕು.

H. ಯಶಸ್ವಿ ಟೆಂಡರುದಾರರು ಅವರ ಗುತ್ತಿಗೆ ಅವಧಿಯಲ್ಲಿ ವಿದ್ಯುತ್ ಮತ್ತು ನೀರಿನ ಕರಗಳನ್ನು ಅವರೇ ಸಂದಾಯ ಮಾಡುವುದು.

I. ಈಗಿರುವ ಡೆಡ್ ಸ್ಟಾಕ್ ಸಾಮಾನುಗಳು ಉಪಹಾರ ಗೃಹದಲ್ಲಿ ಇದ್ದಲ್ಲಿ ಅವುಗಳನ್ನು ಟೆಂಡರುದಾರರು ಉಪಯೋಗಿಸಿಕೊಳ್ಳಬಹುದು. ಇವುಗಳನ್ನು ಪಡೆದುಕೊಳ್ಳುವಾಗ ಯಾದಿ ಮಾಡಿ ಸ್ಥಾನಿಕ ಅಭಿಯಂತರರ ಪರವಾನಿಗೆಯೊಂದಿಗೆ ಪಡೆದುಕೊಳ್ಳಬೇಕು ಹಾಗೂ ಹಿಂದಿರುಗಿಸುವಾಗ ಯಾದಿಯ ಪ್ರಕಾರ ಹಿಂದಿರುಗಿಸಬೇಕು. ಯಾದಿಯ ಪ್ರತಿಯನ್ನು ಸ್ಥಾನಿಕ ಅಭಿಯಂತರರ ಕಚೇರಿಗೆ ಸಲ್ಲಿಸಬೇಕು.

J. ಉಪಾಹಾರ ಗೃಹದ ಕಟ್ಟಡದಲ್ಲಿ ಏನಾದರೂ ಬದಲಾವಣೆ ಮಾಡಬೇಕಾದಲ್ಲಿ ಈ ವಿಶ್ವವಿದ್ಯಾಲಯದ ಅಧಿಕಾರಿಗಳ ಪೂರ್ವಾನುಮತಿಯನ್ನು ಪಡೆದುಕೊಳ್ಳಬೇಕು.

K. ಯಶಸ್ವಿ ಟೆಂಡರುದಾರರು ತಮ್ಮ ಅವಧಿ ಮುಕ್ತಾಯವಾದ ಕೂಡಲೇ ಯಥಾ ಸ್ಥಿತಿಯಲ್ಲಿಯೇ ಕಟ್ಟಡ ಹಾಗೂ ತಾವು ಪಡೆದುಕೊಂಡ ಸಾಮಾನುಗಳನ್ನು ಸ್ಥಾನಿಕ ಅಭಿಯಂತರರಿಗೆ ಒಪ್ಪಿಸಬೇಕು.

L. ಯಶಸ್ವಿ ಟೆಂಡರುದಾರರು ಸ್ವತ: ತಾವೇ ಉಪಹಾರ ಗೃಹವನ್ನು ನಡೆಸಿಕೊಂಡು ಹೋಗಬೇಕು.

M. ಯಶಸ್ವಿ ಟೆಂಡರುದಾರರು ಈ ವಿಶ್ವವಿದ್ಯಾಲಯದ ಉಪಾಹಾರ ಗೃಹವನ್ನು ನಡೆಸುವ ಕುರಿತಂತೆ ಎಲ್ಲ ಕಾನೂನುಬದ್ಧ ನಿಯಮಗಳನ್ನು ಕೈಕೊಳ್ಳುವುದು ಹಾಗೂ ಚಾಲ್ತಿಯಲ್ಲಿದ್ದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವುದು.

4. ಯಶಸ್ವಿ ಟೆಂಡರುದಾರರು **ರೂ. 200/-** ಮೌಲ್ಯದ ಛಾಪಾ ಕಾಗದವನ್ನು ತೆಗೆದುಕೊಂಡು ಬಂದು ಈ ವಿಶ್ವವಿದ್ಯಾಲಯದಲ್ಲಿ ಕರಾರುನಾಮೆ ಮಾಡಿಕೊಳ್ಳಬೇಕು. ಕರಾರುನಾಮೆಗೆ ಸಹಿ ಮಾಡುವ ಪೂರ್ವದಲ್ಲಿ **ರೂ.10,000/- (ಹತ್ತುಸಾವಿರ ಮಾತ್ರ)** ಗಳ ಹುಂಡಿಯನ್ನು ಹಣಕಾಸು ಅಧಿಕಾರಿಗಳು, ಕರಾಕಾವಿ, ಹುಬ್ಬಳ್ಳಿ ರವರ ಪದನಾಮದಲ್ಲಿ ತೆಗೆದು **ಭದ್ರತಾ ಠೇವಣಿ** ಎಂದು ಇಡಬೇಕು. ಸದರ ಭದ್ರತಾ ಠೇವಣಿಯನ್ನು ಗುತ್ತಿಗೆ ಅವಧಿಯು ಸಮಾಧಾನಕರವಾಗಿ ಮುಕ್ತಾಯಗೊಂಡ ದಿನಾಂಕದಿಂದ ಒಂದು ತಿಂಗಳ ನಂತರ ಮರಳಿಸಲಾಗುವುದು. ಒಂದು ವೇಳೆ ಈ ವಿಶ್ವವಿದ್ಯಾಲಯದ ಯಾವುದೇ ವಸ್ತು/ಕಟ್ಟಡ ಹಾಗೂ ಇತರೇ ಸಮಾಗ್ರಿಗಳಿಗೆ ಧಕ್ಕೆಯಾದಲ್ಲಿ ಅಥವಾ ಹಾನಿ ಸಂಭವಿಸಿದಲ್ಲಿ ಅದನ್ನು ಭದ್ರತಾ ಠೇವಣಿಯಿಂದ ಕಡಿತಗೊಳಿಸಿ ಮಿಕ್ಕ ಮೊತ್ತವನ್ನು ಮರಳಿಸಲಾಗುವುದು. ಹಾಗೂ ಭದ್ರಾತ ಠೇವಣಿ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.

5. ಟೆಂಡರುಗಳನ್ನು, ಯಾವುದೇ ಕಾರಣಗಳನ್ನು ನೀಡದೇ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ವಿಶ್ವವಿದ್ಯಾಲಯವು ಕಾಯ್ದಿರಿಸಿಕೊಂಡಿರುತ್ತದೆ.

6. ಯಶಸ್ವಿ ಟೆಂಡರುದಾರರಿಗೆ, ಅವರ ಟೆಂಡರುಗಳ ಅಂಗೀಕಾರಗೊಂಡಂತೆ ಈ ಕಚೇರಿಯಿಂದ ತಿಳಿಸಲಾಗುವ ದಿನಾಂಕದಿಂದ ಒಂದು ವಾರದ ಒಳಗೆ ಈ ಕಚೇರಿಗೆ ಬಂದು ಕರಾರುನಾಮೆ ಒಪ್ಪಂದಕ್ಕೆ ಸಹಿಮಾಡಿ, ಉಪಹಾರ ಗೃಹ ನಡೆಸಿಕೊಂಡು ಹೋಗಲು ಕಾರ್ಯ ಪ್ರವೃತ್ತರಾಗಬೇಕು. ಹೀಗೆ ಕಾರ್ಯ ಪ್ರವೃತ್ತರಾಗದಿದ್ದಲ್ಲಿ ಮತ್ತು

ಸಕಾಲದಲ್ಲಿ ಒಂಡಂಬಡಿಕೆಯನ್ನು ಮಾಡಿಕೊಳ್ಳದಿದ್ದಲ್ಲಿ ಅಂತಹ ಯಶಸ್ವೀ ಟೆಂಡರುದಾರರ ಬೇಡಿಕೆಯನ್ನು ತಿರಸ್ಕರಿಸಿ ಮುಂದಿನ ಕಡಿಮೆ ಟೆಂಡರದಾರರಿಗೆ ಗುತ್ತಿಗೆಯನ್ನು ನೀಡಲಾಗುವುದು.

7. ಯಶಸ್ವಿ ಟೆಂಡರುದಾರರು ತಿಂಡಿ–ತಿನಿಸುಗಳ ದರಗಳನ್ನು ಬದಲಾಯಿಸಲು ಅವಕಾಶ ಇರುವುದಿಲ್ಲ. ಒಂದು ವೇಳೆ ತಿಂಡಿ–ತಿನಿಸುಗಳ ಬೆಲೆಯನ್ನು ಈ ವಿಶ್ವವಿದ್ಯಾಲಯದ ಪೂರ್ವಾನುಮತಿ ಇಲ್ಲದೆ ಏರಿಸಿದಲ್ಲಿ ಅವರ ಗುತ್ತಿಗೆಯನ್ನು ರದ್ದುಪಡಿಸಲಾಗುವುದು.

8. ಉಪಹಾರ ಗೃಹವನ್ನು ನಡೆಸುವ ಟೆಂಡರುದಾರರು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಿಂದ ಉಪಹಾರಗೃಹ/ಕ್ಯಾಂಟಿನ್/ಹೊಟೇಲ್ ನಡೆಸಲು ಅನುಮತಿಯನ್ನು ಪಡೆದಿರಬೇಕು. ಸದರ ಅನುಮತಿಯನ್ನು ಪಡೆಯದಿದ್ದಲ್ಲಿ ಯಶಸ್ವಿ ಟೆಂಡರುದಾರರ ಬೇಡಿಕೆಯು ಸ್ವೀಕೃತಿಯಾದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಅನುಮತಿಯನ್ನು ಪಡೆದು ಸಲ್ಲಿಸಬೇಕು. ಒಂದು ವೇಳೆ ಸಲ್ಲಿಸದಿದ್ದಲ್ಲಿ ಅವರ ಗುತ್ತಿಗೆಯನ್ನು ರದ್ದುಗೊಳಿಸಿ ಮುಂದಿನ ಅರ್ಹ ಟೆಂಡರುದಾರರಿಗೆ ನೀಡಲಾಗುವದು.

9. ಕರಾರು ಒಪ್ಪಂದವಾದ ನಂತರ ಗುತ್ತಿಗೆ ಅವಧಿಯು ಮುಕ್ತಾಯಗೊಳ್ಳುವವರೆಗೂ ಅಥವಾ ಮುಂದಿನ ವ್ಯವಸ್ಥೆಯಾಗುವವರೆಗೂ ಉಪಾಹಾರಗೃಹದ ಒಳಗೆ ಹಾಗೂ ಹೊರಗಡೆ ಶುಚಿತ್ವವನ್ನು ಪಾಲಿಸಿಕೊಂಡು ಬರಬೇಕು ಹಾಗೂ ತಯಾರಿಸುವ ತಿಂಡಿ–ತಿನಿಸುಗಳು, ಪಾನೀಯಗಳು ಒಳ್ಳೆಯ ಗುಣಮಟ್ಟದ್ದಾಗಿರತಕ್ಕದ್ದು. ದೇಹಕ್ಕೆ ಹಾನಿಕಾರಕವಾಗಿರಬಾರದು. ಇದಕ್ಕೆ ತಪ್ಪಿದಲ್ಲಿ ಅವರ ಇಎಂಡಿ (ಭದ್ರತಾ ಠೇವಣಿ) ಮೊತ್ತವನ್ನು ಹಾಗೂ ಮುಂಗಡ ಬಾಡಿಗೆ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಇದಲ್ಲದೇ ಈ ವಿಶ್ವವಿದ್ಯಾಲಯವು ವಿಧಿಸಬಹುದಾದ ದಂಡವನ್ನು ಕೂಡ ಪಾವತಿಸಬೇಕಾಗುವುದು.

10. ಗುತ್ತಿಗೆ ಅವಧಿಯ ಕಾಲು ಭಾಗದ ಸಮಯದಷ್ಟು ವಿಸ್ತರಿಸುವ ಅಧಿಕಾರವನ್ನು ಈ ವಿಶ್ವವಿದ್ಯಾಲಯವು ಕಾಯ್ದಿರಿಸಿಕೊಂಡಿರುತ್ತದೆ.

11. ಒಂದು ವೇಳೆ ಉಪಹಾರಗೃಹದ ತಿಂಡಿಗಳ ಸೇವನೆಯಿಂದ ಈ ವಿಶ್ವವಿದ್ಯಾಲಯದ ಯಾವುದೇ ವ್ಯಕ್ತಿ/ವಿದ್ಯಾರ್ಥಿ/ಸಿಬ್ಬಂದಿಗಳಿಗೆ ಅನಾರೋಗ್ಯ ಅಥವಾ ಪ್ರಾಣಹಾನಿ ಸಂಭವಿಸಿದ್ದಲ್ಲಿ ಅದಕ್ಕೆ ಉಪಹಾರ ಗೃಹವನ್ನು ನಡೆಸುತ್ತಿರುವ ಗುತ್ತಿಗೆದಾರರೇ ಜವಾಬ್ದಾರರಾಗಿರುತ್ತಾರೆ.

23/06/16

ಕುಲಸಚಿವರು

ಗೆ,

____________________

____________________.

<u>ಪ್ರತಿಯನ್ನು:</u>

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕರಾಕಾವಿ, ನವನಗರ, ಹುಬ್ಬಳ್ಳಿ ರವರ ಮಾಹಿತಿಗಾಗಿ.
2. ಹಣಕಾಸು ಅಧಿಕಾರಿಗಳು, ಕರಾಕಾವಿ, ನವನಗರ, ಹುಬ್ಬಳ್ಳಿ ರವರ ಮಾಹಿತಿಗಾಗಿ.
3. ಕುಲಸಚಿವರು (ಮೌಲ್ಯಮಾಪನ) ರವರ ಆಪ್ತ ಕಾರ್ಯದರ್ಶಿಗಳು, ಕರಾಕಾವಿ, ನವನಗರ, ಹುಬ್ಬಳ್ಳಿ ಇವರ ಮಾಹಿತಿಗಾಗಿ ಹಾಗೂ ಅವರ ಕಾರ್ಯಾಲಯದ ನೋಟೀಸ್ ಬೋರ್ಡ್‌ಗೆ ಒಂದು ಪ್ರತಿಯನ್ನು ಅಂಟಿಸಲು.
4. ಸ್ಥಾನಿಕ ಅಭಿಯಂತರರು, ಕರಾಕಾವಿ, ನವನಗರ, ಹುಬ್ಬಳ್ಳಿ
5. ನಿರ್ದೇಶಕರು, ಕಾನೂನು ಶಾಲೆ, ಕರಾಕಾವಿ, ನವನಗರ, ಹುಬ್ಬಳ್ಳಿ
6. ಐ.ಸಿ.ಟಿ. ವಿಭಾಗ, , ಕರಾಕಾವಿ, ನವನಗರ, ಹುಬ್ಬಳ್ಳಿ ರವರ ಮಾಹಿತಿ ಹಾಗೂ ಸದರ ಟೆಂಡರ್ ಪ್ರಕಟಣೆಯನ್ನು ಈ ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಹಾಕಲು ಕೋರಿದೆ.